O.S. No. 17/10 PW.2 Dated 15-07-2019.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಟಿ ಎಂ ವಕೀಲರಿಂದಃ ವಾದಿ ಪರವಾಗಿ

ನಾನು ಮರಸುಹೊಸಳ್ಳಿ ಗ್ರಾಮದಲ್ಲಿ ವಾಸವಿದ್ದೇನೆ. ಹುಟ್ಟಿದಂದಿನಿಂದಲೂ ಅದೇ ಗ್ರಾಮದಲ್ಲಿ ವಾಸವಿದ್ದೇನೆ. ನಮ್ಮ ಊರಿನ ಜನಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯ ಹಾಗೂ ಅವರ ಪೂರ್ವಜರ ಬಗ್ಗೆ ನನ್ನ ತಂದೆಯ ಕಡೆಯಿಂದ ಕೇಳಿ ಪಡೆದುಕೊಂಡಿದ್ದೇನೆ. ವಾದಿಯ ವಂಶಜರ ದಾಖಲೆಗಳ ಬಗ್ಗೆ ನೋಡಿ ತಿಳಿದುಕೊಂಡಿದ್ದೇನೆ. ಈ ಪ್ರಕರಣದ ಬಗ್ಗೆ ನಾನು ನನ್ನ ತಂದೆಯಿಂದ ಕೇಳಿ ತಿಳಿದುಕೊಂಡಿದ್ದೇನೆ, ಹಾಗೂ ಗ್ರಾಮಸ್ಥರಿಂದಲೂ ಕೇಳಿ ತಿಳಿದುಕೊಂಡಿದ್ದೇನೆ. ದಾವೆಯಲ್ಲಿ ವಾದಿಯರು ಹಾಜರುಪಡಿಸಿದ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ವಾದಿಯರ ವಂಶಸ್ಥರನ್ನು ಬೇರೆ ಬೇರೆ ಉಪನಾಮಗಳಿಂದ ಕರೆಯುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ವಿಗಳು ಮೂಲತಃ ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ಆಸ್ತಿ ಖರೀದಿಸುವ ಮೊದಲು ಅದು ಮಾರಾಟಗಾರಿಗೆ ಯಾರಿಂದ ಹಾಗೂ ಯಾವ ರೀತಿ ಬಂತು ಎಂದು ತಿಳಿದುಕೊಳ್ಳಬೇಕು ಎಂದರೆ ಸರಿ. ರಾಜೇಗೌಡರ ತಂದೆಯ ಹೆಸರು ಯಾಲಕ್ಕಿಗೌಡ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದ ವಿವರಣೆ ನನಗೆ ತಿಳಿದಿದೆ ದಾವಾಸ್ವಿ ಯಾರೆಲ್ಲಾ ಹೆಸರಿನಲ್ಲಿದೆಯೋ ಅವರೆಲ್ಲರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿ.

2. ದಾವಾ ಐಟಂ ನಂ. 3, 28 ಗುಂಟೆ ಯಾರ ಹೆಸರಿನಲ್ಲಿದೆ ಎಂದು ನನಗೆ ತಿಳಿದಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇತ್ತು, ಹಾಗೂ ಆನಂತರ ಯಾರ್ಯಾರಿಗೆ ಎಷ್ಟೆಷ್ಟು ವಿಸ್ತೀರ್ಣದ ಜಮೀನು ಸಿಕ್ಕಿದೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಸರ್ವೆ ನಂಬರಿಗೆ ಸಂಬಂಧಿಸಿದಂತೆ ಯಾವುದೇ ಕ್ರಯಪತ್ರಗಳನ್ನು ನಾನು ಹಾಜರುಪಡಿಸಿಲ್ಲ. ಐಟಂ ನಂ. 4 ಸರ್ವೆ ನಂ. 53/3 ಯಾರ ಹೆಸರಿನಲ್ಲಿದೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮಿನು ಇತ್ತು ಹಾಗೂ ಆನಂತರ ಯಾರ್ಯಾರಿಗೆ ಎಷ್ಟೆಷ್ಟು ವಿಸ್ತೀರ್ಣದ ಜಮೀನು ಸಿಕ್ಕಿದೆ ಎಂದು ನಾನು ತಿಳಿದುಕೊಂಡಿಲ್ಲ. ಸರ್ವೆ ನಂ. 53/4 ಮೂಲತಃ ಯಾರ ಹೆಸರಿನಲ್ಲಿತ್ತೆಂದು ನಾನು ತಿಳಿದುಕೊಂಡಿಲ್ಲ. ಸರ್ವೆ ನಂ. 53/4 ಕ್ಕೆ ಸಂಬಂಧಿಸಿದಂತೆ ಪಹಣಿಯನ್ನಾಗಲಿ, ಅಥವಾ ಯಾವುದೇ ದಾಖಲೆಯನ್ನಾಗಲಿ ನಾನು ತೆಗೆಸಿ ನೋಡಿಲ್ಲ. ನಾನು ಮುಖ್ಯವಿಚಾರಣೆಯಲ್ಲಿ ನಾನು ತಿಳಿಸಿರುವಂತೆ ಖರೀದಿದಾರರ ಬಗೆಗಿನ ದಾಖಲೆಗಳನ್ನು ಪಡೆಯಲು ನಾನು ಅರ್ಜಿ ಸಲ್ಲಿಸಿದ್ದೇನೆ. ದಾವಾಸ್ತಿಯ ಬಗ್ಗೆ ನಾನು ನನ್ನ ವಕೀಲರ ಕಡೆಯಿಂದ ಕೇಳಿ ತಿಳಿದುಕೊಂಡಿದ್ದೇನೆ.

3. ಸರ್ವೆ ನಂ. 53/2 ರಲ್ಲಿ 26 ಗುಂಟೆ ಜಮೀನನ್ನು ವಾದಿಯರ ಅರ್ಜಿಯ ಮೇರೆಗೆ ನ್ಯಾಯಾಲಯದ ಆದೇಶದ ಮೇರೆಗೆ ಡಿಲೀಟ್ ಮಾಡಲಾಗಿದೆ ಎಂದರೆ ಸರಿ. ಈ ಬಗ್ಗೆ ನಾನು ಯಾವುದೇ ಅಪೀಲು ಹೋಗಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಸದರಿ ಆಸ್ತಿಯನ್ನು ಸೇರಿಸಿಲ್ಲವೆಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಐಟಂ ನಂ. 10 ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.12 ಮೂಲತಃ ಯಾರಿಗೆ ಸೇರಿದ್ದು ಹಾಗೂ ಯಾರಿಗೆ ಎಷ್ಟು ಜಮೀನು ಹಂಚಿಕೆಯಾಗಿದೆ ಎಂದು ನನಗೆ ಗೊತ್ತಿಲ್ಲ. ಅದು ಯಾರಿಗೆ ಮಾರಾಟವಾಗಿದೆ ಎಂದು ನನಗೆ ಗೊತ್ತಿಲ್ಲ. ಎಂ.ಹೊಸಳ್ಳಿ ಗ್ರಾಮದ ಸರ್ವೆ ನಂ. 70/5 ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ. ಎಂ.ಹೊಸಳ್ಳಿ ಗ್ರಾಮದಲ್ಲಿರುವ ಕೃಷ್ಣೇಗೌಡ ಬಿನ್ ಯಾಲಕ್ಕಿಗೌಡ ವಾಸವಿರುವ 29 X 30 ಅಡಿ ವಿಸ್ತೀರ್ಣದ ಮಂಗಳೂರು ಹೆಂಚಿನ ಮನೆ ಯಾರ ಹೆಸರಿನಲ್ಲಿದೆ ಎಂದು ನನಗೆ ತಿಳಿದಿಲ್ಲ. ಪುಟ್ಟರಾಜೇಗೌಡ (ಉ) ಪುಟ್ಟರಾಜು ಬಿನ್ ಸಗನೇಗೌಡ ರವರ ಮನೆ ಹೌಸಿಂಗ್ ಬೋರ್ಡ್ನಲ್ಲಿದೆ, ಆದರೆ ಅದರ ಖಾತಾ ನಂಬರ್ ಹಾಗೂ ಇತರೆ ವಿವರ ನನಗೆ ತಿಳಿದಿಲ್ಲ. ರತ್ನಮ್ಮ ಕೋಂ ಲೇ. ದೇವರಾಜು ರವರ ಹೆಸರಿನಲ್ಲಿ ಇರುವ ಆಸ್ತಿಗಳ ಬಗ್ಗೆ ನನಗೆ ತಿಳಿದಿಲ್ಲ. ಬಿಕ್ಕೋಡು ರಸ್ತೆ ಮರಸುಹೊಸಳ್ಳಿ ಗ್ರಾಮದ ಕಣತೂರು

ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಬರುವ ಆಸ್ತಿ ನಂ. 235 ರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ತೆಗೆದು ಪರಿಶೀಲಿಸಿಲ್ಲ.

4. ವಾದಿಯ ಮೂಲಪುರುಷನಾದ ವೆಂಕಟೇಗೌಡರಿಗೆ ಮೂರು ಜನ ಮಕ್ಕಳು. ಅವರೆಂದರೆ ತಿಮ್ಮೇಗೌಡ, ಸಗನೇಗೌಡ, ಯಾಲಕ್ಕಿಗೌಡ. ತಿಮ್ಮೇಗೌಡರಿಗೆ ರಂಗಮ್ಮ ಮತ್ತು ಜಯಮ್ಮ ಎನ್ನುವ ಇಬ್ಬರು ಮಕ್ಕಳು. ರಾಜೇಗೌಡರನ್ನು ವಾದಿಯರ ತಂದೆ ದತ್ತುತೆಗೆದುಕೊಂಡ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ತಂದೆಯಿಂದ ವಾದಿಯರ ಪೂರ್ವಜರ ಬಗ್ಗೆ ಮಾಹಿತಿ ತಿಳಿದುಕೊಂಡ ನಂತರವು ರಾಜೇಗೌಡರನ್ನು ದತ್ತುತೆಗೆದುಕೊಂಡ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ತೆಗೆದುನೋಡಿಲ್ಲ. ರಾಜೇಗೌಡರನ್ನು ಅಂದಾಜು 70 ವರ್ಷಗಳ ಹಿಂದೆ ದತ್ತುತೆಗೆದುಕೊಂಡಿರುತ್ತಾರೆ. ದತ್ತುತೆಗೆದುಕೊಂಡ ಸಂದರ್ಭದಲ್ಲಿ ಸಾಮಾನ್ಯವಾಗಿ ಸದರಿ ಮಗುವಿನ ಎಲ್ಲಾ ದಾಖಲೆಗಳಲ್ಲಿ ದತ್ತುತಂದೆಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿಯೂ ರಾಜೇಗೌಡರ ತಂದೆಯ ಹೆಸರು ಯಾಲಕ್ಕಿಗೌಡ ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ರಾಜೇಗೌಡರ ಚುನಾವಣಗುರುತಿನ ಚೀಟಿ, ಪಡಿತರಚೀಟಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ರಾಜೇಗೌಡರನ್ನು ತಿಮ್ಮೇಗೌಡರು ದತ್ತುತೆಗೆದುಕೊಂಡಿಲ್ಲವೆಂದರೆ ಸರಿಯಲ್ಲ. ನನಗೆ ದಾವಾಸ್ತಿಗಳ ಬಗ್ಗೆಯಾಗಲಿ, ವಾದಿಯ ಬಗ್ಗೆಯಾಗಲಿ ಏನು ತಿಳಿಯದಿದ್ದರು ಸಹ ನನ್ನ ವಕೀಲರಿಗೆ ಸುಳ್ಳು ಮಾಹಿತಿ ನೀಡಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ ದಾವಾಸ್ತಿಗಳು ವಾದಿಯರ ಮೂಲಪುರುಷನಾದ ವೆಂಕಟೇಗೌಡರಿಗೆ ಸೇರಿದ್ದು ಎಂದರೆ ನನಗೆ ತಿಳಿದಿಲ್ಲ. ದಾವಾಸ್ತಿಗಳು ವೆಂಕಟೇಗೌಡರಿಗೆ ಸೇರಿದ ಕಾರಣ ಅವರ ಮೊಮ್ಮಕ್ಕಳಾದ ವಾದಿಯರಿಗೂ ಸಹ ಅದರಲ್ಲಿ ಹಕ್ಕಿದೆ ಎಂದರೆ ಸರಿಯಲ್ಲ.

5. ಒ ಎಸ್ ನಂ. 43/15 ಯಾರು ಯಾರ ವಿರುದ್ಧ ಯಾವ ಪರಿಹಾರ ಕೋರಿ ಹೂಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಾನು ಓದಿ ತಿಳಿದುಕೊಂಡಿಲ್ಲ. ಸದರಿ ದಾವೆಯಲ್ಲಿ ಇರುವ ಅನುಸೂಚಿ ಸ್ವತ್ತು ತಿರುಮಲೇಗೌಡರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ತಿರುಮಲೇಗೌಡರಿಗೆ ಸೇರಿರುವ ಕಾರಣ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿಯಲ್ಲ. ನನ್ನ ತಂದೆ ಖರೀದಿಸಿದ ಆಸ್ತಿ ಮೂಲತಃ ವೆಂಕಟೇಗೌಡರಿಗೆ ಸೇರಿದ್ದು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ರಾಜೇಗೌಡರಿಗೆ ಸೇರಿದ್ದು ಎನ್ನುತ್ತಾರೆ. ವೆಂಕಟೇಗೌಡರಿಗೆ ಸೇರಿದ ಆಸ್ತಿ ಅವರ ಮಕ್ಕಳ ನಡುವೆ ಯಾವ ರೀತಿ ವಿಭಾಗವಾಯಿತು ಎಂದು ನಾನು ತಿಳಿದುಕೊಂಡಿಲ್ಲ. ವೆಂಕಟೇಗೌಡರ ಆಸ್ತಿಂಯನ್ನು ಕೇವಲ ಸಗನೇಗೌಡ ಮತ್ತು ಯಾಲಕ್ಕಿಗೌಡ ಇಬ್ಬರೇ ವಿಭಾಗಮಾಡಿಕೊಂಡು ತಿಮ್ಮೇಗೌಡರನ್ನು ಸದರಿ ವಿಭಾಗದಲ್ಲಿ ಸೇರಿಸಿಕೊಂಡಿಲ್ಲವೆಂದರೆ ನನಗೆ ಗೊತ್ತಿಲ್ಲ. ಆ ಕಾರಣಕ್ಕಾಗಿಯೇ ತಿಮ್ಮೇಗೌಡರ ಮಕ್ಕಳಾದ ವಾದಿಯರು ತಮ್ಮ ತಂದೆಯಿಂದ ಬರಬೇಕಾಗಿದ್ದ ದಾವಾಸ್ತಿಯ ಪಾಲನ್ನು ಕೋರಿ ದಾವೆ ಹೂಡಿದ್ದಾರೆ ಎಂದರೆ ನನಗೆ ತಿಳಿದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು